


بسم اللہِ الرّحمٰن الرّحیم

# ತಹ್‌ರೀಕ್ ಜದೀದ್ – ನವ ವರ್ಷ ಆರಂಭ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **04–11–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ನವೆಂಬರ್ ತಿಂಗಳ ಪ್ರಥಮ ಜುಮುಅ ಆಗಿದೆ. ಆದುದರಿಂದ ರೂಢಿ ಪ್ರಕಾರ ಇಂದಿನ ಖುತ್‌ಬದಲ್ಲಿ ತಹ್‌ರೀಕ್ ಜದೀದ್‌ನ ಹೊಸ ವರ್ಷದ ಆರಂಭದ ಪ್ರಕಟಣೆ ಮತ್ತು ಕಳೆದ ವರ್ಷದಲ್ಲಿ ಅಲ್ಲಾಹನು ನೀಡಿದ ಅನುಗ್ರಹಗಳ ಬಗ್ಗೆ ಪ್ರಸ್ತಾಪಿಸಲಾಗುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪ್ರತಿಯೊಬ್ಬ ಪ್ರವಾದಿ ತನ್ನ ಉದ್ದೇಶ ಲಕ್ಷ್ಯಗಳನ್ನು ಈಡೇರಿಸಲು ಸಾಂಪತ್ತಿಕ ತ್ಯಾಗಗಳ ಬಗ್ಗೆ ಪ್ರೇರೇಪಿಸಿದ್ದಾರೆ. ಪವಿತ್ರ ಖುರ್‌ಆನ್‌ನಲ್ಲಿ ಸಹ ಅದರ ಬಗ್ಗೆ ಪ್ರೇರೇಪಣೆ ನೀಡಲಾಗಿದೆ. ಯಾರು ತ್ಯಾಗ ಮಾಡುತ್ತಾರೋ ಅವರಿಗೆ ಅಲ್ಲಾಹನು ಇಹಲೋಕದಲ್ಲಿಯೇ ಅನುಗ್ರಹ ನೀಡುತ್ತಾನೆ ಎಂದು ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ. ಪವಿತ್ರ ಖುರ್‌ಆನ್ ಸೂರತುಲ್ ಬಖರ ವಚನ 262ರಲ್ಲಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವವರ ಉದಾಹರಣೆಯನ್ನು ನೀಡುತ್ತಾ ಅಲ್ಲಾಹನು ಹೇಳುತ್ತಾನೆ: ಯಾವ ವಿಶ್ವಾಸಿಗಳು ನಿಷ್ಠಾಬದ್ಧರಾಗಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾರೋ ಅಂತಹ ಜನರು ನೀಡಿದ ಸಾಲವನ್ನು ಅಲ್ಲಾಹನು ಮರುಪಾವತಿ ಮಾಡದೆ ಬಿಟ್ಟುಬಿಡುವುದಿಲ್ಲ. ಅಂತಹ ಜನರಿಗೆ ಇಹ ಪರ ಲೋಕಗಳಲ್ಲಿ ಅಲ್ಲಾಹನು ಪರಿಮಿತಿಯಿಲ್ಲದೆ ಅನುಗ್ರಹ ದಯಪಾಲಿಸುತ್ತಾನೆ.

ಈ ಯುಗದಲ್ಲಿ ಅಲ್ಲಾಹನು ಇಸ್ಲಾಮ್ ಧರ್ಮ ಪ್ರಚಾರಕ್ಕೋಸ್ಕರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರ ಹೊಣೆಗಾರಿಕೆ ಏನೆಂದರೆ, ಅವರು ಇಸ್ಲಾಮ್ ಧರ್ಮದ ಪ್ರಚಾರವನ್ನು ಮಾಡುವುದು ಮತ್ತು ಏಕದೇವ ವಿಶ್ವಾಸ (ತೌಹೀದ್) ಸ್ಥಾಪಿಸುವುದು ತಮ್ಮ ಕಡ್ಡಾಯ ಕರ್ತವ್ಯವಾಗಿ ಈಡೇರಿಸಬೇಕಾಗಿದೆ. ನಿಷ್ಠಾವಂತರಾಗಿ ಈ ಹೊಣೆಗಾರಿಕೆಯನ್ನು ಈಡೇರಿಸುವುದಾದರೆ ಅಲ್ಲಾಹನ ಅನುಗ್ರಹಗಳಿಗೆ ಅವರು ವಾರೀಸುದಾರರಾಗುವರು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದಾರೆ: ನಮಾಝ್, ಉಪವಾಸ ಮತ್ತು ಅಲ್ಲಾಹನ ನಾಮಸ್ಮರಣೆ (ಝಿಕ್ರೆ ಇಲಾಹೀ) ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ಶಕ್ತಿಯನ್ನು ಅನೇಕಪಟ್ಟು ವರ್ಧಿಸುತ್ತದೆ.

ಈ ಹದೀಸು ಒಬ್ಬ ನೈಜ ಸತ್ಯವಿಶ್ವಾಸಿಯ ಸ್ಥಿತಿಯನ್ನು ಚಿತ್ರಿಸುತ್ತದೆ. ಕೇವಲ ಸಾಂಪತ್ತಿಕ ತ್ಯಾಗ ಸಾಕಾಗಲಾರದು ಅದರೊಂದಿಗೆ ಇತರ ಧಾರ್ಮಿಕ ಅನುಷ್ಠಾನಗಳೂ ಆವಶ್ಯಕವಾಗಿವೆ. ಅನಂತರ ಅಲ್ಲಾಹನು ಹೇಗೆ ಅನುಗ್ರಹ ನೀಡುತ್ತಾನೆಂದರೆ ಮನುಷ್ಯ ಆಶ್ಚರ್ಯಚಕಿತನಾಗುತ್ತಾನೆ. ನಾವು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದ್ದೇವೆ ಎಂದು ಮನುಷ್ಯರು ಸಂತೋಷಪಡ ಬಾರದು. ಸಾಂಪತ್ತಿಕ ತ್ಯಾಗದೊಂದಿಗೆ ಇತರ ಆರಾಧನೆಗಳನ್ನೂ ಮಾಡುವುದು ಆವಶ್ಯಕವಾಗಿದೆ.

(ಹುಝೂರ್ ಅಯ್ಯದಹುಲ್ಲಾಹು ತಆಲಾ ಹಝ್ರತ್ ರಾಬಿಅ ಬಸರಿ ಎಂಬ ಮಹಿಳೆ ಅಲ್ಲಾಹನ ಬಗ್ಗೆ ಹೊಂದಿದ್ದ ಪರಿಪೂರ್ಣ ಭರವಸೆ (ತವಕ್ಕುಲ್) ಬಗ್ಗೆ ವಿವರಿಸುತ್ತಾ ಹೇಳಿದರು:) ಈ ಮಹಿಳೆ ಅಲ್ಲಾಹನ ಮಾರ್ಗದಲ್ಲಿ ಎರಡು ರೊಟ್ಟಿಗಳನ್ನು ನೀಡಿದಾಗ ಆಕೆಯ ಅತಿಥಿಗಳಿಗೋಸ್ಕರ ಇಪ್ಪತ್ತು ರೊಟ್ಟಿಗಳು ಆಕೆಗೆ ಲಭಿಸಿತು.

ಇಂದಿನ ಕಾಲದಲ್ಲಿ ಧಾರ್ಮಿಕ ಉದ್ದೇಶ ಲಕ್ಷ್ಯಗಳನ್ನು ಈಡೇರಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಲ್ಲಾಹನು ಕಳುಹಿಸಿರುವನು. ಅವರು ಸ್ಥಾಪಿಸಿದ ಜಮಾಅತ್ ಮೂಲಕ ಧರ್ಮ ಪ್ರಚಾರದ ಕೆಲಸ ಜರಗುತ್ತಾ ಇದೆ. ಅಹ್ಮದಿಯಾ ಜಮಾಅತ್ ಪ್ರತಿ ವರ್ಷ ಪುಸ್ತಕಗಳನ್ನು ಪ್ರಕಟಿಸಲು, ಮಸ್‌ಜಿದ್‌ಗಳನ್ನು ನಿರ್ಮಿಸಲು, ಮಿಶನ್ ಹೌಸ್‌ಗಳನ್ನು ನಿರ್ಮಿಸಲು ಅನೇಕ ಮಿಲಿಯನ್ ಪೌಂಡ್‌ಗಳನ್ನು ಖರ್ಚು ಮಾಡುತ್ತಾ ಇದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸಂಗ್ರಹಿಸಿದ ಹಣ ಆಫ್ರಿಕದ ದೇಶಗಳಲ್ಲೂ ಭಾರತದಲ್ಲೂ ಬೇರೆ ಅನೇಕ ದೇಶಗಳಲ್ಲೂ ಖರ್ಚು ಮಾಡಲಾಗುತ್ತಿದೆ. ಆರ್ಥಿಕ ಸ್ಥಿತಿ ಈಗ ಕೆಟ್ಟು ಹೋಗಿದ್ದರೂ ನಮ್ಮ ಜಮಾಅತಿನ ಸದಸ್ಯರು ಈ ಖರ್ಚುಗಳನ್ನು ಈಡೇರಿಸುತ್ತಿರುವುದು ಅಲ್ಲಾಹನು ಅನುಗ್ರಹ ನೀಡುತ್ತಾ ಇರುವುದರಿಂದಾಗಿದೆ. ಅಲ್ಲಾಹನು ಸಹ ತಾನು ಸತ್ಯವಿಶ್ವಾಸಿಗಳೊಂದಿಗೆ ವರ್ತಿಸುವ ದೃಶ್ಯಗಳನ್ನು ತೋರಿಸುತ್ತಿದ್ದಾನೆ. ಬಡದೇಶಗಳಲ್ಲಿಯೂ ಶ್ರೀಮಂತ ದೇಶಗಳಲ್ಲಿಯೂ ಪ್ರತಿ ಸ್ಥಳದಲ್ಲಿ ಸಾಂಪತ್ತಿಕ ತ್ಯಾಗ ಮಾಡುವವ ರನ್ನು ಆಶ್ಚರ್ಯಕರವಾದ ರೀತಿಯಲ್ಲಿ ಅನುಗ್ರಹಿಸುತ್ತಿದ್ದಾನೆ.

(ಅನಂತರ ಹುಝೂರ್ ಅಯ್ಯದಹುಲ್ಲಾಹು ತಆಲಾ ಲೈಬೀರಿಯಾ, ಆಸ್ಟ್ರೇಲಿಯಾ, ತಂಝಾನಿಯಾ, ಗ್ಯಾಂಬಿಯಾ, ನೈಜರ್, ಗಿನಿ ಕನಾಕರಿ ಮತ್ತು ಭಾರತ ಸಮೇತ ವಿವಿಧ ದೇಶಗಳ ಪುರುಷರು, ಮಹಿಳೆಯರು, ವೃದ್ಧರು, ಬಾಲಕ ಬಾಲಿಕೆಯರು, ಐಶ್ವರ್ಯವಂತರೂ ಬಡವರು ಮೊದಲಾದ ವಿವಿಧ ಮಟ್ಟಗಳ, ವಿವಿಧ ವರ್ಣಗಳ, ವಿವಿಧ ವಿಭಾಗಗಳ ನಿಷ್ಠಾವಂತ ಅಹ್ಮದಿಯರ ಸಾಂಪತ್ತಿಕ ತ್ಯಾಗಗಳ ಬಗ್ಗೆ ವಿಶ್ವಾಸ ವರ್ಧಕ ಘಟನೆಗಳನ್ನು ವಿವರಿಸಿದರು.)

(ಹುಝೂರ್ ಅಯ್ಯದಹುಲ್ಲಾಹು ತಆಲಾ ಹೇಳಿದರು:) ಭಾರತದ ವಕೀಲುಲ್ ಮಾಲ್ ಹೇಳುತ್ತಾರೆ: ಇಲ್ಲಿ ಒಬ್ಬರು ತಹ್‌ರೀಕ್ ಜದೀದ್ ಚಂದ ನೀಡುವುದರಲ್ಲಿ ಮುಂಚೂಣಿ ಯಲ್ಲಿರುತ್ತಾರೆ. ಅವರೊಂದಿಗೆ ಚಂದವನ್ನು ವರ್ಧಿಸಬೇಕೆಂದು

